**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಕಾರವಾರ.**

**ಸಿ.ಸಿ 250-2016** **ಸಿ. ಡಬ್ಲು: 1**

**ಪಿ ಡಬ್ಲು 1**

| | |
|---|---|
| ಸಾಕ್ಷಿದಾರರ ಹೆಸರು | ನಯನಮಾಲ ಶಂಕರ್ ವಜಂಡ<br>66 ವರ್ಷ<br>ನಿವೃತ್ತ ಅಬಕಾರಿ ನೀರಿಕ್ಷಕರು<br>ಕಾರವಾರ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 05-03-2019.** |

**ಮುಖ್ಯ ವಿಚಾರಣೆ: ಶ್ರೀ ಮತಿ ಎಪಿಪಿ ವಕೀಲರಿಂದ:**

ನಾನು ಫೆಬ್ರವರಿ 2009 ರಿಂದ ಮೇ 2013 ರವರೆಗೆ ಅಬಕಾರಿ ಉಪ ಆಯುಕ್ತರ ಕಚೇರಿ ಕಾರವಾರ ಅಬಕಾರಿ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ: 31-08-2010 ರಂದು ಬೆಳಿಗ್ಗೆ 7-45 ಗಂಟೆಗೆ ಕಾರವಾರದಿಂದ ಮಾಜಾಳಿ ಗ್ರಾಮಕ್ಕೆ ಹೋಗುವ ಗಾಂವಗೇರಿ ಕ್ರಾಸ್ ಇಂದ ಕೋಟಾರ್ ಗೆ ಹೋಗುವ ರಸ್ತೆಯಲ್ಲಿ ಅಕ್ರಮವಾಗಿ ಸಾರಾಯಿ ಸಾಗಟ ಮಾಡುತ್ತಿದ್ದಾರೆ ಎಂದು ಬಂದ ಬಾತ್ಮಿಯ ಮೇರೆಗೆ ನಾನು ಕಚೇರಿಯಲ್ಲಿದ್ದ ಚಾಸಾ-4 ಮತ್ತು 5 ರವರವನ್ನು ಕರೆದುಕೊಂಡು ಇಲಾಖಾ ವಾಹನದಲ್ಲಿ ಹೊರಟು ಸದಾಶಿವಗಡದ ಬಳಿ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ದಾಳಿಯ ವಿಷಯ ತಿಳಿಸಿ ಅವರು ಒಪ್ಪಿಕೊಂಡ ಮೇರೆಗೆ ಮಾಹಿತಿ ಬಂದ ಸ್ಥಳಕ್ಕೆ 9-00 ಗಂಟೆಗೆ ಹೋದಾಗ ಅಲ್ಲಿ ಪ್ರಯಾಣಿಕರ ಆಟೋ ರಿಕ್ಷಾ ಸಂಖ್ಯೆಕೆ ಎ 30 8794 ಪೂರ್ವ ದಿಕ್ಕಿನಿಂದ ಮಾಜಾಳಿ ಕಡೆಗೆ ಬರುತ್ತಿರುವಾಗ ಕೈ ಸನ್ನೆ ಮಾಡಿ ವಾಹನವನ್ನುನಿಲ್ಲಿಸಿ ನೋಡಿದಾಗ ಅದರಲ್ಲಿ ಚೀಲ ಕಂಡು ಬಂದಿತು. ಅದರಲ್ಲಿ ಸಾರಾಯಿ ಇರಬಹುದು ಎಂದು ಚಾಲಕನನ್ನುವಿಚಾರಿಸಿದಾಗ ಆತನು ತಾನು ಗೋವಾದಿಂದ ತಾನು ಸಾರಾಯಿ ಸಾಗಟ ಮಾಡುತ್ತಿದ್ದೇನೆ ಎಂದು ತಿಳಿಸಿದನು. ಆತನ ಹೆಸರು ಮತ್ತು ವಿಳಾಸ ವಿಚಾರಿಸಲಾಗಿ ಆತನ ಹೆಸರು ಪ್ರಶಾಂತ್ ಗೋಪಿನಾಥ ಕಾಣಕೋಣಕರ್ ಎಂದು ತಿಳಿಸಿದನು. ಸಾರಾಯಿ ಸಾಗಾಟ ಮಾಡಲು ಪಾಸ್ ಯಾ ಪರ್ಮಿಟ್ ಇದೆಯಾ ಎಂದು ವಿಚಾರಿಸಿಲಾಗಿ ಇಲ್ಲ ಎಂದು ತಿಳಿಸಿದನು. ಘಟನಾ ಸ್ಥಳವು ಬಹಳ ದೂರದ ಪ್ರದೇಶವಾಗಿದ್ದು ಅದು ಅಲ್ಲಿಂದ ನ್ಯಾಯಾಧೀಶರಿಂದ ಸರ್ಚ್

ವಾರಂಟ್ ಪಡೆಯಲು ಸಮಾಯಾವಕಾಶ ವುಡಿದ ಕಾರಣ  ಸ್ಥಳದಲ್ಲಿಯೇ  ಶೋಧನಾ ಸಮ್ಮುಚಿತ ಆಧಾರ ಪತ್ರ ಬರೆದು ಪಂಚರೊಂದಿಗೆ  ಪರಿಶೀಲನೆ ಮಾಡಿದಾಗ ಒಟ್ಟು 8 ಮೂಟೆಗಳು ಕಂಡು ಬಂದವು. 5 ಮೂಟೆಗಳಲ್ಲಿ  750 ಎಂ ಎಲ್ ಅಳತೆಯ 48 ರಂತೆ ಲೈಫ್ ಹೌಸ್ ಪ್ರಿಮಿಯಂ ವಿಸ್ಕಿ ಎಂಬ  for sale in goa only ಎಂದು ಬರೆದ 240 ಬಾಟಲುಗಳು , ಹಾಗೂ 1 ಮೂಟೇಯಲ್ಲಿ ಗೋವಾ ಪಾಮ್ ಕೊಕನೆಟ್ ಪೆನ್ನಿ ಎಂಬಲೇಬಲ್ ವುಳ್ಳ  for sale in goa only 750 ಎಂ ಎಲ್ ಅಳತೆಯ 48 ಬಾಲಟುಗಳು , 7 ಮತ್ತು 8 ನೇ ಮೂಟೆಯಲ್ಲಿ 90 ಎಂ ಎಲ್ ಅಳೆತಯ ತಲಾ 300 ರಂತೆ  ರಿಯಲ್ ಹನಿ ಓಲ್ಡ ಗ್ರೇಪ್ ಬ್ರಾಂಡಿ  ಎಂದು ಮುದ್ರಿತವಾದ for sale in goa only ಎಂದು ಬರೆದ ಒಟ್ಟು 600 ಸ್ಯಾಶೇಟ್ ಗಳು ಇದ್ದವು.

2. ರಾಸಾಯನಿಕ ಪರೀಕ್ಷೆಗಾಗಿ 2 ಬಾಟಲ್ ಮತ್ತು 2 ಸ್ಯಾಶೇಟ್‌ಗಳನ್ನು ಪ್ರತ್ಯೇಕವಾಗಿ ತೆಗೆದು ಬಿಳಿ ಬಟ್ಟೆಯಿಂದ ಸುತ್ತಿ ಇಲಾಖಾ ಅರಗು ಹಾಕಿ ಪಂಚರ ಹಾಗೂ ನನ್ನ ಚೀಟಿಯನ್ನು ಅಂಟಿಸಲಾಯಿತು. ಪಂಚನಾಮೆಯನ್ನು 9–00 ಗಂಟೆಯಿಂದ 10–30 ಗಂಟೆಯವರೆಗೆ ಸ್ಥಳದಲ್ಲಿಯೇ ಬರೆಯಲಾಯಿತು.

3.ವಶಪಡಿಸಿಕೊಂಡ ಮುಮಾ, ಆರೋಪಿತ , ಪಂಚನಾಮೆಯನ್ನು ಹಾಗೂ ಆಟೋ ರಿಕ್ಷಾ ಅನ್ನು ಠಾಣೆಗೆ ತೆಗೆದುಕೊಂಡು ಬಂದು ಕಚೇರಿಗೆ ಬಂದು ಸರ್ಕಾರದ ಪರವಾಗಿ ನ್ಯಾಯಾಲಯಕ್ಕೆ ಪಿರ್ಯಾದನ್ನು ಬರೆದು , ಪ್ರವವ ತಯಾರಿಸಿ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ, ಮತ್ತೊಂದು ಪ್ರತಿಯನ್ನು ಮೇಲಾಧಿಕಾರಿಯವರಿಗೆ ಸಲ್ಲಿಸಿರುತ್ತೇನೆ. ಸೂಕ್ತ ಬೆಂಗಾವಲಿನೊಂದಿಗೆ ಆರೋಪಿತನನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

4. ರಾಸಾಯನಿಕ ಪರೀಕ್ಷೆಗಾಗಿ ತೆಗೆದಿಟ್ಟ ಬಾಟಲ್ ಗಳನ್ನು ಹಾಗೂ ಸ್ಯಾಶೇಟ್ ಗಳನ್ನು ಎಫಎಸ್ ಎಲ್ ಧಾರವಾಡ ಇಲ್ಲಿಗೆ ದಿಃ 26–11–2010 ರಂದು ಚಾಸಾ–4 ಅವರ ಮೂಲಕ ಕಳುಹಿಸಿ , ವರದಿಯನ್ನು ದಿಃ 27–11–2010 ರಂದು ಪಡೆದಿರುತ್ತೇನೆ. ವಾಹನವನ್ನು ಅಧಿಕೃತ ಅಧಿಕಾರಿ ಅವರಿಗೆ ಹಸ್ತಾತಂರಿಸಿರುತ್ತೇನೆ.  ಆರೋಪಿತನ ವಿರುದ್ದ ಸಾಕಷ್ಟು ಸಾಕ್ಷಾಧಾರಗಳು ಲಭ್ಯವಿದ್ದ ಕಾರಣ ಆತನ ವಿರುದ್ದ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.  ಸಾಕ್ಷಿಯು ಮುಂದುವರಿದು ಆರೋಪಿಗೆ ವಾಹನವನ್ನು ಬಿಡುಗಡೆ ಮಾಡಲು ಸಲ್ಲಿಸಿದ ಅರ್ಜಿಗೆ ನಾನು ತಕರಾರನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ . ನಂತರ ನನಗೆ ಬಂದ ಮೇಲಾಧಿಕಾರಿಗಳ ಆದೇಶದ ಪ್ರಕಾರ ವಾಹನವನ್ನು ಆರೋಪಿತನಿಗೆ ಬಿಡುಗಡೆ ಮಾಡಿರುತ್ತೇನೆ.

5. ಸಾಕ್ಷಿಗೆ ಈಗ ಪಂಚನಾಮಯನ್ನು ತೋರಿಸುತ್ತಿದ್ದು ಅದರ ಮೇಲಿರುವ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸದ್ರಿ ಪಂಚನಾಮೆಯನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ದೂರನ್ನು ತೋರಿಸುತ್ತಿದ್ದು ಅದರ ಮೇಲಿರುವ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸದ್ರಿ ದೂರನ್ನು ನಿಪಿ-2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಸ್ವತ್ತಿನ ಪಟ್ಟಿಯನ್ನು ತೋರಿಸುತ್ತಿದ್ದು ಅದರ ಮೇಲಿರುವ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸದ್ರಿ ಸ್ವತ್ತಿನ ಪಟ್ಟಿಯನ್ನು ನಿಪಿ-3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಶೋಧನಾ ಸಮ್ಮುಚಿತ ಆಧಾರ ತೋರಿಸುತ್ತಿದ್ದು ಅದರ ಮೇಲಿರುವ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸದ್ರಿ ಶೋಧನ ಸಮ್ಮುಚಿತ ಆಧಾರ ಅನ್ನು ನಿಪಿ-4 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು.ಸಾಕ್ಷಿಗೆ ಈಗ ಎಫಎಸ್ ಎಲ್ ವರದಿಯನ್ನು ತೋರಿಸುತ್ತಿದ್ದು ಅದನ್ನು ಅವರು ಗುರುತಿಸುತ್ತಾರೆ .ಸದ್ರಿ ದಾಖಲಾತಿಯನ್ನು ಸಾಕ್ಷಿಯು ಗುರುತಿಸಿದ್ದರಿಂದ ಅದನ್ನು ನಿಪಿ-5 ಎಂದು ಗುರುತಿಸಲಾಯಿತು.

6. ಸಾಕ್ಷಿಗೆ ಈಗ 2 ಬಾಟಲ್ ಹಾಗೂ 2 ಸ್ಯಾಶೇಟ್ ಗಳಿರುವ ಒಂದು ಚೀಲವನ್ನು ತೋರಿಸುತ್ತಿದ್ದು ಅವುಗಳನ್ನು ಅವರು ಗುರುತಿಸಿದ್ದರಿಂದ ಅವುಗಳನ್ನು ಮುಮಾ-1 ರಿಂದ ಮುಮಾ-3 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿತನನ್ನು ಸಾಕ್ಷಿಯು ಗುರುತಿಸುತ್ತಾರೆ.

**<u>ಪಾಟೀ ಸವಾಲುಃ ಶ್ರೀ ಪಿ ಜಿ ಪಿ ವಕೀಲರಿಂದ</u>**

ಪ್ರಕರಣದ ಫಿರ್ಯಾದುದಾರಳು ಹಾಗೂ ತನಿಖಾಧಿಕಾರಿ ನಾನೇ ಎಂದರೆ ಸರಿ. ಘಟನಾ ಸ್ಥಳದಲ್ಲಿ ಜನ ಸಂಚಾರ ಮತ್ತು ವಾಹನ ಸಂಚಾರ ಇದೆ ಎಂದರೆ ಸರಿಯಲ್ಲಿ ಘಟನಾ ಸ್ಥಳದ ಬಳಿ ಸುಮಾರು 25 ರಿಂದ 30 ಮನೆಗಳಿವೆ ಎಂದರೆ ಸರಿಯಲ್ಲ. ಸರ್ಚ್ ವಾರಂಟ್ ಪಡೆದಿದ್ದರಾ ಎಂದರೆ ಇಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ .ಪಂಚರನ್ನು ಸದಾಶಿವಗಡದಿಂದ ನಾನೇ ಕರೆದುಕೊಂಡು ಬಂದಿದ್ದೆ. ಪಂಚರು ಸ್ಥಳೀಯರಲ್ಲ ಎಂದರೆ ಸದಾಶಿವಗಡ ಸೀಬರ್ಡ್ ಕಾಲೋನಿಯ ನಿವಾಸಿಗಳು ಎಂದು ನುಡಿಯುತ್ತಾರೆ. ಪಂಚರು ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ.

ನಾನು ಘಟನಾ ಸ್ಥಳಕ್ಕೆ ಹೋಗಿಯೇ ಇಲ್ಲ , ಸ್ಥಳದಲ್ಲಿ ಯಾವುದೇ ಪಂಚನಾಮೆಯನ್ನು ಮಾಡಿಲ್ಲ , ಆರೊಪಿತನನ್ನು ನೋಡಿಲ್ಲ , ಆತನು ಯಾವುದೇ ಮುಮಾಗಳನ್ನು ತೆಗೆದುಕೊಂಡು ಹೋಗಿಲ್ಲ, ಮುಮಾಗೂ ಆರೋಪಿಗೂ ಯಾವುದೇ ಸಂಬಂಧ , ಇಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿದ್ದ ಬೇವಾರಸುದಾರ ಸಾರಾಯಿಯನ್ನು ದುರುಪಯೋಗ ಪಡಿಸಿ ಆರೋಪಿತನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದು ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ . ಹೇ. ಕೇ. ಸರಿ. ಇದೆ

ಹೆ.ಪ್ರ.ದ. ನ್ಯಾ. ದಂ. ಕಾರವಾರ.